ತೆಗೆದುಕೊಂಡಿಲ್ಲ. ಅವರನ್ನು ವಜಾ ಮಾಡಬೇಕೆನ್ನುವ ಪರಿಸ್ಥಿತಿಗೆ ಬಂದಿದೆ. ಅದನ್ನು ಏನು ಮಾಡಬೇಕು ಎಂದು ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಜನರಲ್ ಬಾಡಿ ಮೀಟಿಂಗ್‌ನಲ್ಲಿ ಇದೇ ವಿಷಯ ಚರ್ಚೆಯಾಯಿತು. ಆಗ ಅಲ್ಲಿ ನಾನು ಇದ್ದೆ. ನಮ್ಮ ಸದಸ್ಯರಾದ ಮಾನ್ಯ ಚವಾಣ್‌ರವರೂ ಕೂಡ ಇದ್ದರು. ನಮ್ಮ ಕಬ್ಬು ಸಾಲುವುದಿಲ್ಲ, ಆ ಕಾರಣ ಬೈಲಹೊಂಗಲದ ಸದಸ್ಯರನ್ನು "ಆ" ವರ್ಗದ ಸದಸ್ಯರನ್ನಾಗಿ ಮಾಡಿಕೊಳ್ಳಬೇಕು ಎಂದು ಹೇಳಿ ಸರ್ವಾನುಮತದಿಂದ ಠರಾವು ಪಾಸ್ ಆಯಿತು. ಆದರೂ ಕುತಂತ್ರ ಮಾಡಿ ಅವರು "ಈ" ವರ್ಗದ ಸದಸ್ಯರನ್ನಾಗಿ ಮಾಡುವುದಕ್ಕೆ ಹೊರಟರು. ಈ ರೀತಿಯಲ್ಲಿ ರಾಜಕಾರಣ ಮಾಡಿ ನೀವು ರೈತರನ್ನು ಹೇಗೆ ಉದ್ಧಾರ ಮಾಡುತ್ತೀರಿ ಎಂದು ಹೇಳಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಸದಸ್ಯರನ್ನಾಗಿ ಮಾಡಿಕೊಳ್ಳುವ ಅವಕಾಶ ಇದೆ. ಆದರೆ ಈ ನಿಯಮಗಳ ಉಲ್ಲಂಘನೆಯಾಗುತ್ತದೆ ಎಂಬ ಕಾರಣದಿಂದ ಇದನ್ನು ಏನು ಮಾಡಬೇಕು ಎನ್ನುವುದು ತೀರ್ಮಾನ ಮಾಡಲಿಲ್ಲ. ಇದರಿಂದ ಠರಾವನ್ನು ಕಾರ್ಯಗತಗೊಳಿಸಿಲ್ಲ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಇದು 23 ಸಾವಿರ ಜನ ರೈತರ ಸಮಸ್ಯೆ. ಸಾವಿರ ಸಾವಿರ ರೂಪಾಯಿ ಸದಸ್ಯತ್ವದ ಹಣವನ್ನು ಅವರು ಪುಕ್ಕಟೆ ಕೊಟ್ಟಿಲ್ಲ? ಸುಮ್ಮನೆ ಅವರೂ ಕೊಟ್ಟಿಲ್ಲ.

ನಮ್ಮ ಕಬ್ಬು ನಾಳೆ ಅಲ್ಲಿಗೆ ಹೋಗುತ್ತದೆ; ನುಲಿಯುತ್ತದೆ; ದುಡ್ಡು ಬರುತ್ತದೆ ಎನ್ನುವ ವಿಚಾರದಿಂದ ಅವರು ಕೊಟ್ಟಿದ್ದಾರೆ 23 ಸಾವಿರ ಜನ 2 ಕೋಟಿ 30 ಲಕ್ಷ ರೂಪಾಯಿ.....

ಅಧ್ಯಕ್ಷರು : ತಾವು ಸಲ್ಯೂಷನ್ ತರಿಸಿ ನೋಡಿ ಒಂದು ನಿರ್ಣಯ ಕೊಡಿ. ಪರಿಶೀಲನೆ ಮಾಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ನಾವು ಎಷ್ಟು ಜನರನ್ನು ಸೇರಿಸಿಕೊಳ್ಳಬಹುದು, ಎಷ್ಟು ಕಬ್ಬು ಬರುತ್ತದೆ ಇದನ್ನು ಪರಿಶೀಲನೆ ಮಾಡಿ ಒಂದು ಕಡೆಯಿಂದ ಕಬ್ಬನ್ನು ತೆಗೆದುಕೊಳ್ಳುತ್ತಿರುವಾಗ....,

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಈ ರೀತಿ ಮಾಡಿ ಬೇರೆ ಬೇರೆ ಕಾರ್ಖಾನೆಗಳನ್ನೆಲ್ಲಾ ಮಾರಿಕೊಂಡಿರಿ, ಇದನ್ನು ಮಾಡಿಕೊಳ್ಳಬೇಕು ಅಂತಿರಾ? ಸಭಾಧ್ಯಕ್ಷರೇ, ಇನ್ನೊಮ್ಮೆ ಇವರ ಉತ್ತರವನ್ನು ತರಿಸಿಕೊಡುತ್ತೀರಾ?

ಅಧ್ಯಕ್ಷರು : ನಾನು ಪರಿಶೀಲನೆ ಮಾಡಲು ಹೇಳುತ್ತೇನೆ. ಇದರ ಬಗ್ಗೆ ಆ್ಯಕ್ಷನ್ ತೆಗೆದುಕೊಳ್ಳಲು ಹೇಳುತ್ತೇನೆ.

ಮೂಡಬಿದರೆ ನ್ಯಾಯ ಬಸದಿಯ ಆವರಣದಲ್ಲಿ ಶಾಂತಿವನದ ಸೌಂದರ್ಯ

581 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂಡಬಿದರೆಯ ನ್ಯಾಯ ಬಸದಿಯ ಆವರಣದಲ್ಲಿ ರಚಿಸಲಾದ ಶಾಂತಿವನದ ಸೌಂದರ್ಯ ಅಭಿವೃದ್ಧಿಗೆ ಸರ್ಕಾರದ ಕಾರ್ಯಕ್ರಮಗಳೇನು?

ಆ) ಇಲ್ಲಿಗೆ ಬರುತ್ತಿರುವ ಜನರ ಅನುಕೂಲತೆಗಳಿಗೆ ಆಸನದ ವ್ಯವಸ್ಥೆ ಮಾಡಲಾಗುವುದೇ?

ಇ) ಇವರ ಸಮಗ್ರ ಅನುಕೂಲತೆಗಳಿಗೆ (ಅಭಿವೃದ್ಧಿ) ಬಗ್ಗೆ ಏನು ಯೋಜನೆ ತಯಾರಿಸಿದೆ?

ಈ) ಈ ಬಗ್ಗೆ ಸರ್ಕಾರ ಯಾವಾಗ ಹಣ ಬಿಡುಗಡೆ ಮಾಡಲಾಗುವುದು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಮೂಡಬಿದ್ರೆಯ ನ್ಯಾಯ ಬಸದಿಯ ಆವರಣದಲ್ಲಿ ರಚಿಸುವ ಶಾಂತಿವನದ ಅಭಿವೃದ್ಧಿಗಾಗಿ ತೋಟಗಾರಿಕೆ ಇಲಾಖೆ ಮತಿಯಿಂದ ರೂ. 1,00, 150-00ಗಳಿಗೆ ಒಂದು ಯೋಜನೆಯನ್ನು ತಯಾರಿಸಿ, ಜಿಲ್ಲಾ ಪಂಚಾಯಿತಿಯ ಮಂಜೂರಾತಿಗಾಗಿ ಕಳುಹಿಸಿಕೊಡಲಾಗಿದೆ. ಈ ಯೋಜನೆಯಂತೆ ತಂತಿ ಬೇಲಿ ಹಾಕುವ ಕಾರ್ಯಕ್ರಮ, ಅಲಂಕಾರಿಕ ಗಿಡಗಳನ್ನು ಖರೀದಿಸಿ ನೆಡುವುದು ಮತ್ತು ಜನರ ಅನುಕೂಲತೆಗೆ ಬೆಂಚುಗಳನ್ನು ಹಾಕಿಸುವ ಕಾರ್ಯಕ್ರಮಗಳು ಸೇರಿರುತ್ತವೆ.

ಆ) ಹೌದು.

ಇ) ಮೇಲೆ ನಮೂದಿಸಿರುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ) ಜಿಲ್ಲಾ ಪಂಚಾಯಿತಿಯವರು ಕ್ರಿಯಾ ಯೋಜನೆಯನ್ನು ಅನುಮೋದಿಸಿ ಹಣ ಬಿಡುಗಡೆ ಮಾಡಬೇಕಾಗಿರುತ್ತದೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಅಧ್ಯಕ್ಷರೇ, ಸಚಿವರು ಕೊಟ್ಟಂಥ ಉತ್ತರದಲ್ಲಿ ಮೂಡಿಬಿದಿರೆಯ, ನ್ಯಾಯಬಸಿದಿಯ 10 ಎಕರೆ ಸ್ಥಳದಲ್ಲಿ ಅದರ ಅಭಿವೃದ್ಧಿಗಾಗಿ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಬೇಕು ಎಂದು ಹೇಳಿ ಜಿಲ್ಲಾಪಂಚಾಯಿತಿಗೆ ಸೂಚನೆ ಕೊಟ್ಟಿದ್ದೇವೆ ಎಂದು ಹೇಳಿದರು. ಬಹುಶ ಇದು ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆ ಎಂದು ಹೇಳಿ ಕನ್ನಡದ ಒಂದು ಉಕ್ತಿಯಂತಾಗಿದೆ. ಆ 10 ಎಕರೆಯ ಉತ್ತಮವಾದಂಥ ಸ್ಥಳದಲ್ಲಿ 5 ಸಾವಿರ ಸಸಿಗಳನ್ನು ಕಳೆದ ವರ್ಷ ನೆಟ್ಟಿದ್ದರು. ಸ್ವಲ್ಪ ಭಾಗ ಅದಕ್ಕೆ ಆವರಣವನ್ನು ಹಾಕಿದ್ದರು. ಈಗ ಅದಕ್ಕೆ ಬೇಕಾದಂಥ ಆವರಣವನ್ನು ಹಾಕಿ ಬರುವಂಥ ಜನಕ್ಕೆ ಆಸನದ ವ್ಯವಸ್ಥೆಯನ್ನು ಮಾಡುವುದಕ್ಕಾಗಿ ಸುಮಾರು 7ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಅಲ್ಲಿಂದ ಕಳುಹಿಸಿಕೊಡಲಾಗಿದೆ, ಆದರೆ ಈಗ ಒಂದು ಲಕ್ಷವನ್ನು ಮಾತ್ರ ಕೊಟ್ಟಿದ್ದೀರಿ. ಬಹಳ ಪ್ರಾಮುಖ್ಯವಾದಂಥ ಒಂದು ಚಾರಿತ್ರಿಕ ಸ್ಥಳದಲ್ಲಿ, ಸಾವಿರಾರು ಯಾತ್ರಿಕರು ತಿರುಗಾಡುವಂತಹ ಸ್ಥಳದಲ್ಲಿ ಅದನ್ನು ಉತ್ತಮ ಪಡಿಸುವಂಥದ್ದು ತಮ್ಮ ಕರ್ತವ್ಯವಾಗಿದೆ. ಆದ್ದರಿಂದ ತೋಟಗಾರಿಕಾ ಸಚಿವರು ಅದಕ್ಕೆ ಕೊಟ್ಟಂಥ ಹಣ ಸಾಕಾಗುವುದಿಲ್ಲ. ಅದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕು ಎಂದು ತಮ್ಮ ಹತ್ತಿರ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಒಂದು ಲಕ್ಷ ಹಣ ಸಾಲದು; ಬಹಳ ಮುಖ್ಯವಾದಂಥ ಸ್ಥಳ ಎಂದು ಹೇಳಿದ್ದಾರೆ. ಸ್ವಲ್ಪ ಜಾಸ್ತಿ ಮಾಡಬೇಕು ಎಂದೂ ಹೇಳಿದ್ದಾರೆ, ನನ್ನ ಕಡೆಗೆ ಆ ರೀತಿಯಾದಂಥ ಒಂದು ಕಾಗದವನ್ನು ಕೊಡಲಿ, ಇನ್ನೂ ಸ್ವಲ್ಪ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಲಿಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಆ ತೋಟವನ್ನು ನೋಡಿಕೊಳ್ಳುವಂಥ ಮೇಲ್ವಿಚಾರಕರು ಯಾರೂ ಅಲ್ಲಿಲ್ಲ; ಯಾರಾದರೂ ಬರುತ್ತಾರೆ. ತೋಟವನ್ನು ಹಾಳು ಮಾಡುತ್ತಾರೆ, ಕಳೆದ ವರ್ಷ ತಾವು ಒಂದು ಬೋರ್‌ವೆಲ್ ಹಾಕಿಸಿ ನೀರಿನ ವ್ಯವಸ್ಥೆಯನ್ನು ಮಾಡಿದ್ದಕ್ಕೆ ನಾನು ತಮಗೆ ಅಬಾರಿಯಾಗಿದ್ದೇನೆ. ಆ ಸಸಿಗಳು ಬೆಳೆಯಲಿಕ್ಕೆ ಮತ್ತು ಅವುಗಳನ್ನು ಇತರ ಪ್ರಾಣಿಗಳಿಂದ ರಕ್ಷಿಸಲಿಕ್ಕೆ ತಾವು ಒಬ್ಬ ಗಾರ್ಡನರ್ ಅನ್ನು ನೇಮಕ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೃಷ್ಣಪ್ಪ : ಅದನ್ನು ಸುರಕ್ಷಿತವಾಗಿ ನೋಡಿಕೊಳ್ಳಲಿಕ್ಕೆ ಏರ್ಪಾಡು ಮಾಡುತ್ತೇನೆ.